ನಮಗನ್ನಿಸಬಹುದು. ಉಪಾಧ್ಯಾಯರಿಂದ, ಇತರ ವ್ಯಕ್ತಿಗಳಿಂದ, ಗ್ರಂಥಗಳಿಂದ, ಇನ್ನೂ ಬೇರೆ ಬೇರೆ ಮೂಲ ಮತ್ತು ಮಾಧ್ಯಮಗಳಿಂದ ನಾವು ಜ್ಞಾನವನ್ನು ಸಂಪಾದಿಸುತ್ತೇವೆ. ಆದರೆ ನಿಜವಾಗಿಯೂ ಈ ಎಲ್ಲ ಮಾಧ್ಯಮಗಳೂ ಆಂತರಿಕ ಜ್ಞಾನೋತ್ಪತ್ತಿಗೆ ಪೂರಕಗಳು. ಹೊರಗಡೆ ಇರುವುದು ಕೇವಲ ವಸ್ತುಗಳು ಅಷ್ಟೇ; ಆದರೆ ಜ್ಞಾನ ಉಂಟಾಗುವುದು ಆಂತರ್ಯದಲ್ಲಿ. ಹೊರಗಿನ ವಸ್ತುಗಳು ಕೇವಲ ಪ್ರಚೋದನೆ ನೀಡುತ್ತವೆ.

ನಾವು ಒಂದು ವಸ್ತುವನ್ನೊ ಘಟನೆಯನ್ನೊ ನೋಡಿದಾಗ ಆ ವಸ್ತು ಅಥವಾ ಘಟನೆಯ ಬಗ್ಗೆ ವಿವಿಧ ಬಗೆಯ ಜ್ಞಾನ ಉಂಟಾಗುವುದು ಮನಸ್ಸಿನಲ್ಲಿ. ಆ ಜ್ಞಾನವು ವಸ್ತುವಿನಲ್ಲಾಗಲಿ, ಘಟನೆಯಲ್ಲಾಗಲಿ ಇರುವುದಿಲ್ಲ. ಒಳಗಿನ ಸ್ಮೃತಿರೂಪದ ಜ್ಞಾನ ದೊಡನೆ ಹೊರಗಿನಿಂದ ಬರುವ ಸಂವೇದನೆಯೂ ಸೇರಿ ಹೊಸ ಜ್ಞಾನ ಉಂಟಾಗುತ್ತದೆ. ಆದ್ದರಿಂದ ಜ್ಞಾನ-ಪ್ರಕ್ರಿಯೆ ನಡೆಯು ವುದು ಅಂತರಂಗದಲ್ಲಿ – ಹೊರಗಿನಿಂದ ತರಕಾರಿ ಬೇಳೆ ಮುಂತಾದುವುಗಳನ್ನು ತಂದು, ಒಳಗಿರುವ ಮಸಾಲೆಯನ್ನು ಸೇರಿಸಿ ಅಡುಗೆಮನೆಯೊಳಗೆ ಅಡುಗೆ ಮಾಡುವಂತೆ. ನರಶಾಸ್ತ್ರದ ದೃಷ್ಟಿಯಿಂದ ಹೇಳುವುದಾದರೆ, ಮಿದುಳಿನ ಕೇಂದ್ರಗಳು ಇಂದ್ರಿಯ ಸಂವೇದನೆಗಳನ್ನು ತೆಗೆದುಕೊಂಡು, ಅವುಗಳನ್ನು ನೆನಪಿನಲ್ಲಿರುವ ಮಾಹಿತಿಗಳೊಡನೆ ಹೋಲಿಸಿ, ನ್ಯೂರಾನುಗಳ ಮೂಲಕ ಹೊಸ ಹೊಸ ಸಂಪರ್ಕಗಳನ್ನು ಏರ್ಪಡಿಸುತ್ತವೆ. ಈ ಸಂಪರ್ಕಗಳನ್ನೇ ನಾವು ಜ್ಞಾನವೆಂದು ಕರೆಯುವುದು.

ನಾವು ಒಂದು ಪುಸ್ತಕವನ್ನು ಓದುತ್ತಿರುವಾಗ ಪಠ್ಯವಿಷಯವು, ನೆನಪಿನ ಕೇಂದ್ರವನ್ನೂ ಸೇರಿದಂತೆ, ಮಿದುಳಿನ ಅನೇಕ ಕೇಂದ್ರಗಳನ್ನು ಪ್ರಚೋದಿಸುತ್ತದೆ. ಇದರಿಂದ ನ್ಯೂರಾನುಗಳು ತ್ವರಿತಗತಿಯಲ್ಲಿ ಚಲಿಸತೊಡಗಿ, ಹೊಸ ಹೊಸ ಸಂಪರ್ಕಗಳನ್ನು ನಿರ್ಮಿಸತೊಡಗುತ್ತವೆ. ಆಗ ನಮಗೆ ಓದಿದ್ದು ಅರ್ಥವಾಗುತ್ತ ಹೋಗುತ್ತದೆ. ಎಲ್ಲಿ ಸಂಪರ್ಕ ಕಡಿದುಹೋಗುವುದೋ ಅಥವಾ ಏರ್ಪಡುವುದಿಲ್ಲವೋ ಆಗ ಆ ವಾಕ್ಯ ಅರ್ಥವಾಗುವುದೇ ಇಲ್ಲ. ಕೆಲವೊಮ್ಮೆ ತಪ್ಪು ಸಂಪರ್ಕದಿಂದ ತಪ್ಪು ಅರ್ಥವಾಗುವ ಸಂಭವವೂ ಉಂಟು. ದೂರವಾಣಿಯ ತಪ್ಪು ಸಂಪರ್ಕದಿಂದ, ಯಾವುದೋ ನಂಬರಿಗೆ ಫೋನ್ ಮಾಡಿದರೆ ಅದು ಬೇರೆ ಯಾರಿಗೊ ಹೋಗುವಂತೆ ಇದು.

ಎಲ್ಲ ಜ್ಞಾನವೂ ಮಾನಸಿಕ ವೃತ್ತಿಗಳ ಮೂಲಕವೇ ಉಂಟಾಗು ವಂಥದು. ಯೋಗಶಾಸ್ತ್ರದ ಒಂದು ಪ್ರಸಿದ್ಧ ಹೇಳಿಕೆ, **ಏಕಮೇವ ದರ್ಶನಂ ಖ್ಯಾತಿರೇವ ದರ್ಶನಂ** – "ವೃತ್ತಿಜ್ಞಾನವೊಂದೇ ನಿಜವಾದ ಜ್ಞಾನ" ಎಂಬುದು ಇದನ್ನೇ ಪ್ರತಿಪಾದಿಸುತ್ತದೆ. ನಾವು ಒಂದು ಹೊರಗಿನ ವಸ್ತುವನ್ನು ನೋಡುವುದೆಂದರೆ, ಆ ವಸ್ತುವಿನ ಪ್ರತಿನಿಧಿರೂಪವಾದ ಮಾನಸಿಕ ವೃತ್ತಿಯನ್ನು ನೋಡುವುದೇ ಆಗಿದೆ. ವಸ್ತುವಿಗೆ ಸಂಬಂಧಿಸಿದ ಸಂವೇದನೆಗಳು ಇಂದ್ರಿಯಗಳ ಮೂಲಕ ಮನಸ್ಸಿಗೆ ಹೋಗಿ ತತ್ಸಂಬಂಧಿಯಾದ ವೃತ್ತಿಯನ್ನು ಮನಸ್ಸಿನಲ್ಲಿ ಉಂಟುಮಾಡುತ್ತವೆ. ನಾವು ಆ ವೃತ್ತಿಯನ್ನು ನೋಡಿ ವಸ್ತುವನ್ನು ನೋಡುತ್ತಿರುವುದಾಗಿ ತಿಳಿಯುತ್ತೇವೆ. ಹೀಗೆ ನಮಗುಂಟಾಗುವ ಎಲ್ಲ ಜ್ಞಾನವೂ ವೃತ್ತಿಜ್ಞಾನವೇ.

### ಆತ್ಮದ ಬೆಳಕು

ಈ ವೃತ್ತಿಯನ್ನು ಬೆಳಗುವುದು ಯಾವುದು? ಬಾಹ್ಯವಸ್ತುವನ್ನು ಬೆಳಗಲು ಹೊರಗಿನ ಬೆಳಕಿದೆ. ಈ ಆಂತರಿಕ ವೃತ್ತಿಯನ್ನು ಬೆಳಗುವ ಆಂತರಿಕ ಬೆಳಕಾವುದು? ಇದೇ ಆತ್ಮದ ಬೆಳಕು, **ಪ್ರಜ್ಞಾಜ್ಯೋತಿ**. ಈ ಬೆಳಕು, ವೃತ್ತಿಗಳ ಮೂಲಕ ಪ್ರತಿಬಿಂಬಿತವಾದಾಗ ನಮಗೆ ಜ್ಞಾನವುಂಟಾಗುತ್ತದೆ. ಅಂದರೆ ನಿಜವಾದ ಜ್ಞಾನ ಆತ್ಮದ ಬೆಳಕೇ. ಬಾಹ್ಯವಸ್ತುಗಳನ್ನು ನೋಡುವಾಗ ಬೆಳಕು ವಸ್ತುಗಳ ಮೇಲೆ ಪ್ರತಿಬಿಂಬಿತವಾಗಿ ಕಣ್ಣನ್ನು ತಲುಪುತ್ತದೆ. ಅಂದರೆ ವಸ್ತುವನ್ನು ನೋಡುವುದೆಂದರೆ ಬೆಳಕನ್ನು ನೋಡುವುದೇ ಆಗಿರುತ್ತದೆ. ಹಾಗೆಯೇ ವೃತ್ತಿಜ್ಞಾನವೆಂದರೆ ಆತ್ಮದ ಬೆಳಕನ್ನು ನೋಡುವುದೇ ಆಗಿದೆ. ಆದ್ದರಿಂದ ಎಲ್ಲ ಜ್ಞಾನಗಳ ಮೂಲಕ ಪ್ರಕಾಶಿಸುತ್ತಿರುವುದು ಆತ್ಮನೇ. ಇದನ್ನೇ ಕೇನೋಪನಿಷತ್ತು ಹೀಗೆ ಹೇಳುತ್ತದೆ: **ಪ್ರತಿಬೋಧವಿದಿತಂ ಮತಂ ಅಮೃತತ್ವಂ ಹಿ ವಿಂದತೇ** – "ಯಾವಾಗ ಆತ್ಮವು ಪ್ರತಿ ಅರಿವಿನಲ್ಲಿಯೂ ತಿಳಿಯಲ್ಪಡುತ್ತದೆಯೊ ಆಗ ತಿಳಿದಂತಾಗುತ್ತದೆ." (*ಕೇನ,* ೨.೪) ದಕ್ಷಿಣಾಮೂರ್ತಿಸ್ತೋತ್ರದ ಒಂದು ಹೇಳಿಕೆ ಹೀಗಿದೆ:

**ನಾನಾಛಿದ್ರ ಘಟೋದರಸ್ಥಿತ ಮಹಾದೀಪಪ್ರಭಾ ಭಾಸ್ವರಂ ।**
**ಜ್ಞಾನಂ ಯಸ್ಯ ತು ಚಕ್ಷುರಾದಿಕರಣದ್ವಾರಾ ಬಹಿಃ ಸ್ಪಂದತೇ ॥ (೪)**

"ಅನೇಕ ರಂಧ್ರಗಳುಳ್ಳ ಮಡಕೆಯ ಮಧ್ಯದಲ್ಲಿ ಇಟ್ಟಿರುವ ಉಜ್ವಲವಾದ ದೀಪಪ್ರಭೆಯು ಪ್ರಕಾಶಿಸುವ ಹಾಗೆ ಜ್ಞಾನವು ಕಣ್ಣು ಮೊದಲಾದ ಇಂದ್ರಿಯಗಳ ಮುಖಾಂತರ ಹೊರಗಡೆ ಸ್ಪಂದಿಸುತ್ತದೆ." ಆದ್ದರಿಂದಲೇ ಆತ್ಮನನ್ನು ಜ್ಞಾನಸ್ವರೂಪ ಎಂದು ಕರೆದಿರುವುದು. (**ಸತ್ಯಂ ಜ್ಞಾನಮ್ ಅನಂತಂ ಬ್ರಹ್ಮ**). ಮುಂಡಕೋಪನಿಷತ್ತು ತನ್ನ ಮೊದಲನೆಯ ಮಂತ್ರದಲ್ಲಿಯೇ, ಬ್ರಹ್ಮವಿದ್ಯೆಯೇ ಎಲ್ಲ ವಿದ್ಯೆಗಳ ಆಧಾರವೆಂದು (**ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಂ**) ಹೇಳುತ್ತದೆ.

ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸಬಹುದು. ಸಿನಿಮಾದಲ್ಲಿ ಒಂದು ಪ್ರೊಜೆಕ್ಟರ್ ಮೂಲಕ ಬಗೆಬಗೆಯ ದೃಶ್ಯ ಗಳನ್ನು ಪರದೆಯ ಮೇಲೆ ಬಿಡುತ್ತಾರೆ. ಜನರು ಆ ದೃಶ್ಯಗಳನ್ನು ನೋಡಿ ಆನಂದಿಸಿ ಹೊರಟುಹೋಗುತ್ತಾರೆ. ಸಾಮಾನ್ಯವಾಗಿ ಯಾರೂ ಅವು ಎಲ್ಲಿಂದ ಬರುತ್ತವೆ ಎಂಬುದರ ಕಡೆ ಗಮನ ಹರಿಸುವುದಿಲ್ಲ. ಹಿಂತಿರುಗಿ ನೋಡಿದರೆ ಬೆಳಕಿನ ಮೂಲಕ ಈ ದೃಶ್ಯಗಳೆಲ್ಲ ಬರುತ್ತಿರುವುದು ತಿಳಿದುಬರುತ್ತದೆ. ಪ್ರೊಜೆಕ್ಟರಿನೊಳಗೆ ಫಿಲ್ಮ್ ನಿರಂತರವಾಗಿ ಚಲಿಸುತ್ತಿರುತ್ತದೆ. ಅದರ ಮೂಲಕ ಬೆಳಕು ಹರಿದುಹೋಗಿ ಪರದೆಯ ಮೇಲೆ ಬಿದ್ದಾಗ ಫಿಲ್ಮಿನಲ್ಲಿರುವ ದೃಶ್ಯಗಳು ಪರದೆಯ ಮೇಲೆ ಮೂಡುತ್ತವೆ. ಹಾಗೆಯೇ ನಿರಂತರವಾಗಿ ಚಲಿಸುವ ಚಿತ್ತವೃತ್ತಿಗಳೇ ಫಿಲ್ಮ್ ಮತ್ತು ಅದರ ಮೂಲಕ ಪ್ರತಿಬಿಂಬಿತವಾಗುವ ಆತ್ಮದ ಬೆಳಕೇ ನಮ್ಮ ಜ್ಞಾನಾನುಭವ. ನಾವು ಹಿಂತಿರುಗಿ ನಮ್ಮ ಅಂತರಂಗದ ಕಡೆ ಅಂತರ್ದೃಷ್ಟಿಯನ್ನು ಹರಿಸಿದಾಗ ಈ ಅರಿವು ನಮಗುಂಟಾಗುತ್ತದೆ. **ಕಶ್ಚಿದ್ಧೀರಾಃ ಪ್ರತ್ಯಗಾತ್ಮಾನಮೈಕ್ಷತ್ ಆವೃತ್ತ ಚಕ್ಷುರಮೃತತ್ವಮಿಚ್ಛನ್** – "ಕೆಲವು ಜ್ಞಾನಿಗಳು ಅಮೃತತ್ವವನ್ನು ಬಯಸಿದವರಾಗಿ ತಮ್ಮ ಗಮನವನ್ನು ಅಂತರ್ಮುಖಿಗೊಳಿಸಿ ತಮ್ಮ ಅಂತರಾತ್ಮವನ್ನು ಅರಿತುಕೊಂಡರು. (*ಕಠ,* ೨.೪.೧)" ಹೀಗೆ ತನ್ನ ಆತ್ಮವನ್ನು ಅರಿಯುವುದೇ ವೇದಾಂತ.

(*ಮುಂದುವರಿಯುವುದು*)

# ನ್ಯಾಯದರ್ಶನದಲ್ಲಿ 'ಅಪವರ್ಗ' ನಿರೂಪಣೆ

ವಿದ್ವಾನ್ ಅನಂತಶರ್ಮಾ ಭುವನಗಿರಿ

**ನ್ಯಾಯದರ್ಶನವು, ತತ್ತ್ವಗಳ ಅರಿವಿನ ಮೂಲಕ, ದೋಷನಿವಾರಣೆಯನ್ನು ಮಾಡಿಕೊಳ್ಳಬೇಕು; ಆ ಮೂಲಕ ಮಿಥ್ಯಾಜ್ಞಾನವನ್ನು ನಿವಾರಿಸಿಕೊಂಡು 'ಅಪವರ್ಗ' ಅಥವಾ 'ಮೋಕ್ಷ'ವನ್ನು ಸಂಪಾದಿಸಿಕೊಳ್ಳಬೇಕು ಎಂದು ಬೋಧಿಸುತ್ತದೆ, ಇದರ ಸರಳ ಪರಿಚಯವನ್ನು ಮಾಡಿಕೊಟ್ಟಿರುವ ಮಾನ್ಯ ಲೇಖಕರು ಬೆಂಗಳೂರಿನ ನಿವಾಸಿಗಳು; ವೇದಾಂತ ಮತ್ತಿತರ ಪ್ರಾಚ್ಯವಿದ್ಯಾ ವಿಭಾಗಗಳಲ್ಲಿ ಅಪಾರ ಪಾಂಡಿತ್ಯವನ್ನು ಪಡೆದವರು.**

**ನ್ಯಾ**ಯದರ್ಶನವು ವೈದಿಕದರ್ಶನಗಳೆಂದು ಪ್ರಸಿದ್ಧವಾದ ಆರು ದರ್ಶನಗಳಲ್ಲಿ ಒಂದಾಗಿದೆ. ಈ ದರ್ಶನದ ಮೂಲಗ್ರಂಥವಾದ 'ನ್ಯಾಯಸೂತ್ರ'ಗಳನ್ನು ರಚಿಸಿದವರು **ಅಕ್ಷಪಾದರು**. ಇವರಿಗೆ **ಗೌತಮ** ಎಂದು ಇನ್ನೊಂದು ಹೆಸರೂ ಇದೆ. ಇವರ ಕಾಲದ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಇವರು ಕ್ರಿ.ಶ. ಐದನೆಯ ಶತಮಾನಕ್ಕಿಂತ ಈಚಿನವರಲ್ಲ ಎಂಬುದು ಬಹುಜನರಿಗೆ ಸಮ್ಮತವಾದ ವಿಷಯ. ಈ ನ್ಯಾಯಸೂತ್ರಗಳಿಗೆ ವಾತ್ಸ್ಯಾಯನರೆಂಬುವವರು ಭಾಷ್ಯವನ್ನು ರಚಿಸಿದ್ದಾರೆ. ತದನಂತರ ಈ ಶಾಸ್ತ್ರವು ವಿಪುಲವಾದ ಬೆಳವಣಿಗೆಯನ್ನು ಕಂಡಿದೆ.

## ನ್ಯಾಯಶಾಸ್ತ್ರದ ಉದ್ದೇಶ

ಮಾನವನ ಪರಮಪುರುಷಾರ್ಥ ಯಾವುದೆಂಬುದನ್ನು ನಿಶ್ಚಯಿಸಿಕೊಟ್ಟು ಅದನ್ನು ಸಾಧಿಸಲು ಮಾರ್ಗದರ್ಶನ ಮಾಡುವುದೇ ಎಲ್ಲ ದರ್ಶನಗಳ ಮುಖ್ಯೋದ್ದೇಶ. ನ್ಯಾಯದರ್ಶನವೂ ಇದೇ ದಾರಿಯಲ್ಲಿ ಸಾಗಿ 'ಅಪವರ್ಗ'ವನ್ನೇ ಮಾನವಜೀವನದ ಮುಖ್ಯ ಗುರಿಯನ್ನಾಗಿ ತೋರಿಸುತ್ತದೆ. ಇತರ ದರ್ಶನಗಳಲ್ಲಿ ಸಾಮಾನ್ಯವಾಗಿ ಮುಕ್ತಿ, ಮೋಕ್ಷ ಎಂದು ಹೇಳುವುದನ್ನೇ ಈ ದರ್ಶನವು 'ನಿಃಶ್ರೇಯಸ್', 'ಅಪವರ್ಗ' ಎಂದು ಕರೆದಿದೆ. ನ್ಯಾಯದರ್ಶನದ ಮೊದಲನೆಯ ಸೂತ್ರದಲ್ಲಿ ಪ್ರಮಾಣ–ಪ್ರಮೇಯ ಮುಂತಾದ ಹದಿನಾರು ಪದಾರ್ಥಗಳ ತತ್ತ್ವವನ್ನು ತಿಳಿದರೆ ನಿಃಶ್ರೇಯಸ್ಸು ದೊರಕುತ್ತದೆ ಎಂದು ಹೇಳಲಾಗಿದೆ. ಎರಡನೆಯ ಸೂತ್ರದಲ್ಲಿ ತತ್ತ್ವಜ್ಞಾನವು ನಿಃಶ್ರೇಯಸ್ಸನ್ನು ದೊರಕಿಸಿಕೊಡುವ ಮಾರ್ಗವನ್ನು ಹೇಳುವಾಗ, **ಅಪವರ್ಗ** ಎಂಬ ಪದವನ್ನು ಉಪಯೋಗಿಸಿದೆ. **ದುಃಖ–ಜನ್ಮ–ಪ್ರವೃತ್ತಿ–ದೋಷ–ಮಿಥ್ಯಾಜ್ಞಾನಾನಾಮ್ ಉತ್ತರೋತ್ತರ ಅಪಾಯೇ ತದನಂತರ ಅಪಾಯಾದ್ ಅಪವರ್ಗಃ** ಎನ್ನುತ್ತದೆ ಆ ಸೂತ್ರ. ದುಃಖ, ಜನ್ಮ, ಪ್ರವೃತ್ತಿ, ದೋಷ ಮತ್ತು ಮಿಥ್ಯಾಜ್ಞಾನ – ಇವುಗಳಲ್ಲಿ ಮುಂದುಮುಂದಿನದು ಹೋದರೆ ಅದರ ಹಿಂದುಹಿಂದಿನದು ಕಳೆದು ಅಪವರ್ಗ ದೊರಕುತ್ತದೆ ಎಂಬುದು ಈ ಸೂತ್ರದ ತಾತ್ಪರ್ಯ. ಇದರ ಅರ್ಥ ಹೀಗಿದೆ: ಮಿಥ್ಯಾಜ್ಞಾನ ನಾಶವಾದರೆ ದೋಷ ನಾಶವಾಗುತ್ತದೆ. ಅದರಿಂದ ಕರ್ಮದಲ್ಲಿ ಪ್ರವೃತ್ತಿಯಿಲ್ಲದಾಗುತ್ತದೆ. ಆಮೇಲೆ ಜನ್ಮವಿಲ್ಲದಂತಾಗುತ್ತದೆ. ಜನ್ಮವಿಲ್ಲದ್ದರಿಂದ ದುಃಖವೂ ಇಲ್ಲ. ಹೀಗೆ ಎಲ್ಲಕ್ಕೂ ಮೂಲವಾದುದು ಮಿಥ್ಯಾಜ್ಞಾನ. ಅದು ನಾಶವಾಗಬೇಕು. ಇದೇ ನ್ಯಾಯಶಾಸ್ತ್ರದ ಉದ್ದೇಶ.

ಈ ಮಾರ್ಗವನ್ನು ನ್ಯಾಯಶಾಸ್ತ್ರವು ವಿವರಿಸುವ ಬಗೆ ಹೀಗಿದೆ: ಈ ಜಗತ್ತಿನಲ್ಲಿ ಜನ್ಮತಾಳಿದ ಪ್ರತಿಯೊಬ್ಬ ಜೀವಿಯೂ ಹುಟ್ಟಿದಂದಿನಿಂದ ಸಾಯುವವರೆಗೂ ಒಂದಲ್ಲ ಒಂದು ದುಃಖದಿಂದ ಪೀಡಿತನಾಗಿಯೇ ಇರುತ್ತಾನೆ. ಸಮುದ್ರದಲ್ಲಿ ಅಲೆಗಳು ಬರುವಂತೆ ದುಃಖಗಳು ಬರುತ್ತಲೇ ಇರುತ್ತವೆ. ಸುಖವು ಇಲ್ಲವೇ ಇಲ್ಲವೆಂದಲ್ಲ. ಅಮಾವಾಸ್ಯೆಯ ಕಗ್ಗತ್ತಲಿನಲ್ಲಿ ಮಿಂಚೊಂದು ಮಿಂಚಿದಂತೆ ಆಗೊಮ್ಮೆ ಈಗೊಮ್ಮೆ ಸುಖವು ಭಾಸವಾದರೂ ಪುನಃ ದುಃಖದ ಕಗ್ಗತ್ತಲೆ ಆವರಿಸಿಕೊಂಡುಬಿಡುತ್ತದೆ. ಜೀವನದಲ್ಲಿ ದುಃಖದ ಪ್ರಾಬಲ್ಯವನ್ನು ಕಂಡ ವಿವೇಕಿಯು (ಪೂರ್ವಾರ್ಜಿತ ಸತ್ಕರ್ಮಗಳಿಂದ ಅಂಥ ವಿವೇಕವನ್ನು ಗಳಿಸಿಕೊಂಡವನು) ವೈರಾಗ್ಯಹೊಂದಿ ಈ ದುಃಖ ಮತ್ತೆಂದೂ ಮರಳಿಬಾರದಂತೆ ಕಳೆದುಕೊಳ್ಳಲು ಪ್ರಯತ್ನಿಸುತ್ತಾನೆ. ಇಂಥ ಆತ್ಯಂತಿಕ ದುಃಖನಾಶವನ್ನೇ ನ್ಯಾಯಶಾಸ್ತ್ರದಲ್ಲಿ 'ಅಪವರ್ಗ'ವೆಂದು ಕರೆಯಲಾಗಿದೆ. ಬೇರೆಯ ದರ್ಶನಗಳಂತೆ. ನ್ಯಾಯಶಾಸ್ತ್ರದ ಪ್ರಕಾರ, ಮೋಕ್ಷದಲ್ಲಿ ಆನಂದದ ಗಳಿಕೆ ಇಲ್ಲ. ಬಹುಕಾಲದಿಂದ ಭಾರವನ್ನು ಹೊತ್ತು ಬಳಲಿದವನೊಬ್ಬನು ಆ ಭಾರವನ್ನು ಇಳಿಸಿ ಈಗ ಸುಖವಾಯಿತು ಎನ್ನುವಂತೆ, ದುಃಖವನ್ನು ಕಳೆದುಕೊಳ್ಳುವುದೇ ಸುಖವನ್ನು ಪಡೆದಂತೆ ಆಗುತ್ತದೆ, ಅಷ್ಟೇ.

## ದುಃಖನಿವಾರಣೆ

ಆದರೆ ದುಃಖವನ್ನು ಕಳೆದುಕೊಳ್ಳುವುದಾದರೂ ಹೇಗೆ? ಜನ್ಮತಾಳಿದ ಪ್ರತಿಯೊಂದು ಜೀವಿಗೂ ದುಃಖವಿದ್ದೇ ಇದೆ ಎಂಬುದನ್ನು ನೋಡಿದೆವು. ರೋಗರುಜಿನಾದಿಗಳಿಂದ ಶರೀರಕ್ಕೆ ಆಗುವ ಬಾಧೆ, ಸಾಂಸಾರಿಕ ಕಷ್ಟಗಳಿಂದ ಉಂಟಾಗುವ ಮಾನಸಿಕ ಪೀಡೆ, ಪ್ರಾಕೃತಿಕ ಉತ್ಪಾತಗಳಿಂದಾಗುವ ಆಧಿಭೌತಿಕ ದುಃಖ – ಹೀಗೆ ದುಃಖಗಳ ಪರಂಪರೆಯೇ ಇರುತ್ತದೆ. ಇವೆಲ್ಲವೂ ಶರೀರಸಂಬಂಧದಿಂದಾಗಿಯೇ ಉಂಟಾಗುತ್ತದೆ. ಶರೀರವಿದ್ದರೇ ಈ ದುಃಖಗಳನ್ನು ಶರೀರವು ಪಡೆಯುವುದು. ಹೀಗಾಗಿ ಜನ್ಮತಾಳುವುದೇ ಈ ಎಲ್ಲ ದುಃಖಗಳ ದ್ವಾರವನ್ನು ತೆರೆದಂತೆ. ಹುಟ್ಟದೇ ಇರುವವನಿಗೆ ದುಃಖಗಳೇ ಇಲ್ಲ. ಆದ್ದರಿಂದ ದುಃಖದಿಂದ ತಪ್ಪಿಸಿಕೊಳ್ಳಬೇಕಾದರೆ ಜನ್ಮದಿಂದ ತಪ್ಪಿಸಿಕೊಳ್ಳಬೇಕು.

ಜನ್ಮಕ್ಕೆ ಕಾರಣ ಜೀವಿಯ ಧರ್ಮಾಧರ್ಮಗಳು. ಪುಣ್ಯಪಾಪಗಳೆಂಬುದು ಇವುಗಳ ಮತ್ತೊಂದು ಹೆಸರು. ಕೇವಲ ಪುಣ್ಯವನ್ನು ಗಳಿಸಿದ್ದಲ್ಲಿ ದೇವತಾಜನ್ಮ; ಪಾಪವೇ ತುಂಬಿಕೊಂಡಿದ್ದಲ್ಲಿ ನಾರಕಜನ್ಮ ಅಥವಾ ಪಶುಪಕ್ಷಿ ಮುಂತಾದ ಹುಟ್ಟುಗಳು; ಪುಣ್ಯಪಾಪಗಳೆರಡೂ ಮಿಶ್ರವಾಗಿದ್ದಲ್ಲಿ ಮನುಷ್ಯಜನ್ಮ – ಹೀಗೆಂದು